ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

**ಸಿ.ಸಿ. ನಂ. 2146/2025 ಸಿ. ಡಬ್ಲ್ಯೂ: 2 ಪಿ ಡಬ್ಲ್ಯೂ ಃ 2**

ಸಾಕ್ಷಿಯ ಹೆಸರು ಃ ಮಹಾಂತೇಶ ಗುಡ್ಡನ್ನವರ

ತಂದೆಯ ಹೆಸರು ಃ ತಿಪ್ಪಣ್ಣ

ವಯಸ್ಸು ಃ 38 ವರ್ಷ

ಉದ್ಯೋಗ ಃ ಚಾಲಕ

ವಾಸಸ್ಥಳ ಃ ಹಿರೇನರ್ತಿ, ತಾಃ ಕುಂದಗೋಳ.

ದಿನಾಂಕಃ 12/06/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಸಸಅ ರವರಿಂದ

1. ಈಗ ನೋಡುತ್ತಿರುವ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ.1 ಎಂದು ಈಗಾಗಲೇ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು ನಿಪಿ.1 ಕ್ಕೆ ನಾನು ಎರಡು ವರ್ಷಗಳ ಹಿಂದೆ ಕುಂದಗೋಳ ಪೋಲೀಸ್ ಠಾಣೆ ಯಲ್ಲಿ ಸಹಿ ಮಾಡಿದ್ದೇನೆ. ಆರೋಪಿತರ ಪರಿಚಯವಿದೆ. ನಿಪಿ. 1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಸ್ಥಳ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಟೆಟ್ರಾ ಪ್ಯಾಕೆಟಗಳನ್ನು ಅಮಾನತು ಮಾಡಿಲ್ಲ.

( ಮಾನ್ಯ ಸಸಅ ರವರ ಕೋರಿಕೆಯಂತೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅನುಮತಿ ಕೋರಿರುತ್ತಾರೆ. ಕಡತ ಪರಿಶೀಲಿಸಿ ಅನುಮತಿ ನೀಡಲಾಯಿತು).

ಪಾಟೀ ಸವಾಲು ಮಾನ್ಯ ಸಸಅ ರವರಿಂದಃ

2. ದಿಃ 01-09-2022 ರಂದು ಚಾಸಾ 1 ಅವರು ಹಿರೇನರ್ತಿ ಗ್ರಾಮದಲ್ಲಿದ್ದ ನನ್ನನ್ನು ಹಾಗೂ ಚಾಸಾ 3 ಅವರನ್ನು ಪಂಚರಾಗುವಂತೆ ಕರೆದು ದಾಳಿ ಕಾಲಕ್ಕೆ ಹಾಜರಿದ್ದು, ಪಂಚನಾಮೆಗೆ ಬರುವಂತೆ ಕೇಳಿಕೊಂಡ ಮೇರೆಗೆ ನಾವುಗಳು ಒಪ್ಪಿ ನಮ್ಮನ್ನು, ಚಾಸಾ 4 ಮತ್ತು 5 ಅವರೊಂದಿಗೆ ಇಲಾಖಾ ಜೀಪನಲ್ಲಿ ಗ್ರಾಮದ ಹಿರೇನರ್ತಿ ಗ್ರಾಮದ ಗ್ರಾಮ ಪಂಚಾಯತಿ ಕಡೆಗೆ ಹೋಗಿ ನೋಡಿದಾಗ ಅಲ್ಲಿ ಇಬ್ಬರು ತಮ್ಮ ಮುಂದೆ ಒಂದು ಕೈ ಚೀಲವನ್ನು ಇಟ್ಟುಕೊಂಡು ನಿಂತಿದ್ದು ಅವರ ಕಡೆಗೆ ಜನರು ಹೋಗಿ ಬಂದು ಮಾಡುತ್ತಿದ್ದರು. ಆಗ ಸದರಿ ನಾವು ಟೆಟ್ರಾ ಪ್ಯಾಕೆಟಗಳನ್ನು ಮಾರಾಟ

ಮಾಡುವುದನ್ನು ಖಚಿತ ಪಡಿಸಿಕೊಂಡು ಮಃ 03-45 ಗಂಟೆಗೆ ದಾಳಿ ಮಾಡಿದಾಗ ಒಬ್ಬಸಿಕ್ಕಿದ್ದು, ಇನ್ನೊಬ್ಬನು ಓಡಿ ಹೋಗಿದ್ದು, ಸಿಕ್ಕವನ ಹೆಸರು ಕೆಳಲಾಗಿ ಶರೀಫಸಾಬ ತಂದೆ ಸಕ್ರುಸಾಬ ಎಂದು ಓಡಿ ಹೋದವನ ಹೆಸರು ಮೆಹಬೂಬಸಾಬ ತಂದೆ ಮಾಲೀಕಸಾಬ ಕೊರಗು ಎಂದು ತಿಳಿಸಿದ್ದು, ಕೈ ಚೀಲವನ್ನು ತೆಗೆದು ನೋಡಿದಾಗ 90 ಎಮ್ ಎಲ್ ನ 35 ಟೆಟ್ರಾ ಪ್ಯಾಕೆಟಗಳಿದ್ದು, ಅವುಗಳ ಒಟ್ಟು ಬೆಲೆ ರೂ. 1,229/- ಅನುಮತಿ ಕೇಳಲಾಗಿ ಇಲ್ಲ ಎಂದು ತಳಿಸಿದ್ದು ಅವುಗಳನ್ನು ನಮ್ಮ ಸಮಕ್ಷಮ ಪಂಚನಾಮೆಯಲ್ಲಿ ಮಃ03-45 ರಿಂದ 04-50 ಗಂಟೆಗೆ ಜಪ್ತಿ ಪಡಿಸಿಕೊಂಡು ಬಿಳಿ ಬಟ್ಟೆಯಿಂದ ಪ್ಯಾಕ ಮಾಡಿ ಅರಗಿನ ಸೀಲ್‌ನಿಂದ ಬಂದ ಮಾಡಿ ನಮ್ಮಗಳ ಸಹಿಯನ್ನು ಮಾದರಿ ಚೀಟಿಯನ್ನು ಪಡೆದು ಓದಿ ಹೇಳಿದ ನಂತರ ನಿಪಿ.1 ಕ್ಕೆ ಸ್ಥಳ ದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲ ವಿಚಾರ ಗೊತ್ತಿದ್ದರೂ ಸಹ ಆರೋಪಿತರು ನಮ್ಮ ಊರಿನವನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ **(ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ)**

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.